# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **52**

ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಪುರ, (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13-02-2024

ಉತ್ತರಿಸುವವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿ ಹಟ್ಟಿ ಮತ್ತು ಕೋಠಾ ಸಿವರದಲ್ಲಿ ಬರುವ ಸುಮಾರು 1305 ಎಕರೆ 200 ಕುಟುಂಬಗಳ ಮಾಲೀಕರ ಒಪ್ಪಿಗೆ ಇಲ್ಲದೆ ರೈತರ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವಾಗ ಮತ್ತು ಯಾವ ಆಧಾರದ ಮೇಲೆ ಭೂ ಸ್ವಾಧೀನಪಡಿಸಿಕೊಳ್ಳಲಾಯಿತು; (ಇವುಗಳ ಕುರಿತು ಸಂಪೂರ್ಣ ವಿವರ ನೀಡುವುದು) | ಹಟ್ಟಿ ಚಿನ್ನದ ಗಣಿ ಕಂಪನಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವತಿಯಿಂದ ಪ್ರಾರಂಭದಲ್ಲಿ ದಿನಾಂಕ:20-12-1978 ರಲ್ಲಿ 30 ವರ್ಷಗಳ ಅವಧಿಗೆ ಹಟ್ಟಿ ಮತ್ತು ಕೋಟಾ ಸಿವಾರದ ಗ್ರಾಮದ 87 ಸರ್ವೆಗಳಲ್ಲಿ ಒಟ್ಟು 1305.6 ಎಕರೆ (528.35 ಹೆಕ್ಟೇರ್ ) ಜಮೀನನ್ನು Mines & Minerals (Development & Regulations) Act 1957 ಹಾಗೂ ಇನ್ನಿತರ ಕಾಯ್ದೆ ಪ್ರಕಾರ ವಿವಿಧ ಷರತ್ತುಗಳನ್ನು ವಿಧಿಸಿ, ಕಂಪನಿಗೆ ಗಣಿ ಗುತ್ತಿಗೆ ನೀಡಿರುತ್ತಾರೆ. ಗಣಿ ಗುತ್ತಿಗೆ ನೀಡಿದ 1305.6 ಎಕರೆ ಜಮೀನಿನಲ್ಲಿ 826 ಎಕರೆ (334 ಹೆಕ್ಟೇರ್) ಕಂಪನಿಗೆ ಭೂಸ್ವಾಧೀನವಾದ ಜಮೀನು ಸಹ ಸೇರಿದ್ದು, ಸರ್ಕಾರದ ಭೂಸ್ವಾಧೀನ ಅಧಿಕಾರಿಗಳು / ಸಕ್ಷಮ ಇಲಾಖೆಯು ಭೂಸ್ವಾಧೀನ ಕಾಯ್ದೆ ಅನುಸಾರ Consent Award ಪ್ರಕರಣದಲ್ಲಿ ಮಾತ್ರ ರೈತರ ಒಪ್ಪಿಗೆ ಪಡೆದು, ಉಳಿದ ಪ್ರಕರಣದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ಪೂರ್ವದಲ್ಲಿ ಅಧಿಸೂಚನೆ ಹೊರಡಿಸಿ, ಭೂ ಪರಿಹಾರ ನಿಗದಿಪಡಿಸಿ ಸಂಬಂಧಿಸಿದ ರೈತರಿಗೆ ಭೂಪರಿಹಾರ ಪಾವತಿಸಿ ಭೂಸ್ವಾಧೀನ ಪಡಿಸಿಕೊಂಡ ಕಂಪನಿಗೆ ಹಸ್ತಾಂತರಿಸಿರುತ್ತಾರೆ. ಭೂಸ್ವಾಧೀನವಾದ ಮಾಹಿತಿಯು ಸಂಬಂಧಪಟ್ಟ ಇಲಾಖೆಗೆ ಇರುತ್ತದೆ, ಗುತ್ತಿಗೆ ಜಮೀನಿನಲ್ಲಿ ಉಳಿದ 480 ಎಕರೆ (194.35 ಹೆಕ್ಟೇರ್) ಜಮೀನು ಪಟ್ಟಾ ಜಮೀನುಗಳಾಗಿದ್ದು ರೈತರ ಹೆಸರಿನಲ್ಲಿ ಇರುತ್ತವೆ. ಗಣಿ ಗುತ್ತಿಗೆ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಮುಂದುವರೆದು, ಪ್ರತಿ 20 ವರ್ಷಗಳಿಗೊಮ್ಮೆ ಗಣಿ ಗುತ್ತಿಗೆ ಅವಧಿಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ನವೀಕರಿಸುತ್ತ ಬಂದಿರುತ್ತದೆ. ದಿನಾಂಕ:22-3-2014 ರಂದು ಉಪ ನೋಂದಣಾಧಿಕಾರಿ ಕಚೇರಿ, ಲಿಂಗಸಗೂರದಲ್ಲಿ 19-12-2008 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಸರ್ಕಾರದ ಪರವಾಗಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಂಗಳೂರು ರವರು ಕಂಪನಿಗೆ ಗಣಿ ಗುತ್ತಿಗೆಯನ್ನು ನವೀಕರಿಸಿರುತ್ತಾರೆ. |

| | | |
|---|---|---|
| ಆ) | ರೈತರ ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಂಡ ಮೇಲೆ (ಇಸಿ) (ಋಣಭಾರ) ದಲ್ಲಿ ಹಟ್ಟಿ ಚಿನ್ನದ ಗಣಿ ಎಂದುನಮೂದಿಸಿರುವುದು ನಿಜವೆ; | ದಿನಾಂಕ:22-03-2014 ರಂದು ಉಪ-ನೋಂದಣಾಧಿಕಾರಿ ಕಚೇರಿ, ಲಿಂಗಸಗೂರದಲ್ಲಿ ದಿನಾಂಕ:19-12-2008 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಸರ್ಕಾರದ ಪರವಾಗಿ ನಿರ್ದೇಶಕರು, ಗಣಿ ಮತ್ತುಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರು ಕಂಪನಿಗೆ ಗಣಿಗುತ್ತಿಗೆಯನ್ನು ನೊಂದಾಯಿಸುವ ಮುಖಾಂತರ ನವೀಕರಿಸಿರುತ್ತಾರೆ. ಸದರಿ ಗಣಿಗುತ್ತಿಗೆ ನೀಡಿದ ಜಮೀನುಗಳಲ್ಲಿ ನಿಯಮಾನುಸಾರ ಉಪನೊಂದಣಾಧಿಕಾರಿಗಳು, ಲಿಂಗಸಗೂರುರವರು ವಿತರಿಸುವ ಋಣಭಾರ ಪ್ರಮಾಣ(Encumbrance Certificate) ಪತ್ರದ ನಮೂನೆಯ ಕಕ್ಷಿದಾರರ ಹೆಸರಿನಲ್ಲಿ ಬರೆದು ಕೊಟ್ಟವರು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಂಗಳೂರು ಹಾಗೂ ಬರೆಸಿಕೊಂಡವರು ಉಪ ಪ್ರಧಾನ ವ್ಯವಸ್ಥಾಪಕರು (ಭೂ ಅನ್ವೇಷಣೆ), ಹಟ್ಟಿ ಚಿನ್ನದ ಗಣಿಯೆಂದು ನಮೂದಿಸಲಾಗಿದೆ. |
| ಇ) | ಈ ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ಜಿಲ್ಲಾಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? | ಈ ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ಯಾವುದೇ ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ ನೀಡಿರುವುದಿಲ್ಲವೆಂದು ಜಿಲ್ಲಾಧಿಕಾರಿ, ರಾಯಚೂರು ರವರು ತಿಳಿಸಿರುತ್ತಾರೆ. ಆದಾಗ್ಯೂ ಸರ್ಕಾರದ ಮಟ್ಟದಲ್ಲಿ ಈ ಸಂಬಂಧ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ:ಸಿಐ 18 ಸಿಎಂಸಿ 2024

**(ಎಸ್.ಎಸ್. ಮಲ್ಲಿಕಾರ್ಜುನ)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ**
**ತೋಟಗಾರಿಕೆ ಸಚಿವರು**